ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇದೆ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

**ಗದಗ್ ಬೆಟಗೇರಿ ನಗರಸಭೆ ಐ.ಡಿ.ಎಸ್.ಎಂ.ಟಿ.ಯಿಂದ ಹಣಕಾಸು ಸಹಾಯ**

545 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1) ಗದಗ ಬೆಟಗೇರಿ ನಗರಸಭೆ ಐ ಡಿ ಎಸ್ ಎಂ ಟಿ ಯಿಂದ ಹಣಕಾಸು ಸಹಾಯ ಮಾಡುವ ಯೋಜನೆ ಎಂದು ಮಂಜೂರಾಯ್ತು?*

*2) ಈವರೆವಿಗೆ ಐಡಿಎಸ್ ಎಂಟಿ ಯೋಜನೆಯಡಿಯಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಂದ ಬಿಡುಗಡೆಯಾದ ಹಣವೆಷ್ಟು?*

*3) ಈ ಬಿಡುಗಡೆಯಾದ ಹಣದಲ್ಲಿ ಗದಗ-ಬೆಟಗೇರಿ ನಗರಸಭೆ ಮಾಡಿದ ವೆಚ್ಚ ಎಷ್ಟು?*

*4) ಈ ಯೋಜನೆಯಡಿಯಲ್ಲಿ ಸಿಗುವ ಪೂರ್ತಿ ಹಣ ಬಳಸಿಕೊಳ್ಳುವ ಅವಧಿ ಎಷ್ಟು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) 1994-95ನೇ ಸಾಲಿನಲ್ಲಿ

2) ಕೇಂದ್ರ ಸರ್ಕಾರದಿಂದ - 55.00 ಲಕ್ಷ ರೂ.
ರಾಜ್ಯ ಸರ್ಕಾರದಿಂದ - 36.67 ಲಕ್ಷ ರೂ.

3) ಖರ್ಚು ಮಾಡಿಲ್ಲ.

4) ಐದು ವರ್ಷಗಳು.

**ರೋಣ ತಾಲ್ಲೂಕಿನ ಗಜೇಂದ್ರಗಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ**

547 - ಶ್ರೀ ಶೈಲಪ್ಪ ಬಿದರೂರು (ರೋಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರೋಣ ತಾಲ್ಲೂಕಿನ ಗಜೇಂದ್ರಗಡ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಶಾಶ್ವತವಾದ ನೀರು ಪೂರೈಕೆ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?*

*ಇ) ಹಾಗಿದ್ದಲ್ಲಿ ಈ ಯೋಜನೆ ಕಾಮಗಾರಿ 1996-97 ರಲ್ಲಿ ಕೈಗೆತ್ತಿಕೊಳ್ಳಲಾಗುವುದೇ?*